

# ಅಜ್ಞಾತ ಕಲೆ ಟ್ಯಾಟಿಂಗ್

ಒಳಾಂಗಣ ಅಲಂಕಾರ, ಮೇಜಿನ ಮೇಲೆ ಹಾಕಲು, ಟೀವಿ ಕವರ್ ಆಗಿ ಬಳಸಲು, ಸೀರೆ ಅಂಚಿಗೆ ಕುಚ್ಚು ಮಾಡಲು ಬಳಕೆಯಲ್ಲಿರುವ ಟ್ಯಾಟಿಂಗ್ ಸುಮಾರು ಎರಡು ಶತಮಾನಗಳಷ್ಟು ಹಳೆಯ ಕಲೆಯಾದರೂ ಇಂದಿಗೂ ಜನಪ್ರಿಯತೆ ಗಳಿಸಿಲ್ಲ. ಹೀಗಾಗಿ ಇದೊಂದು ಅಜ್ಞಾತ ಕಲೆ. ಇದನ್ನು ಮಾಡಲು ಚಾಕಚಕ್ಯತೆ ಬೇಕು.

■ ಅಂಬಿಕಾ ಆರ್. ಬೆಂಗಳೂರು

ಹತ್ತೊಂಬತ್ತನೇ ಶತಮಾನದಲ್ಲಿ ಬೆಸ್ತರು ತಮ್ಮ ಹೆಂಗಸರಿಗಾಗಿ ದಾರದಿಂದ ಬಲೆಯನ್ನು ಅಲಂಕಾರಿಕವಾಗಿ ಹೊಲಿಯುತ್ತಿದ್ದರು. ಇದೇ ಮುಂದೆ ಟ್ಯಾಟಿಂಗ್ ರೂಪವನ್ನು ಪಡೆಯಿತು. ಇದು ಯೂರೋಪಿಯನ್ ದೇಶಗಳಲ್ಲಿ ಮೊದಲು ಪ್ರಚಲಿತಕ್ಕೆ ಬಂತು. ನಂತರ ಅಮೆರಿಕ, ಆಸ್ಟ್ರೇಲಿಯಾ ಮತ್ತು ಏಷ್ಯಾ ಖಂಡದಲ್ಲಿಯೂ ಜನರಿಗೆ ಪರಿಚಯವಾಯಿತು. ಈಗ ಈ ಕಲೆಯನ್ನು ಮಾಡುವವರು ಎಲ್ಲಾ ದೇಶದಲ್ಲೂ ಇದ್ದಾರೆ. ಆದರೂ ಇದು ಕ್ರೋಶ, ನಿಟ್ಟಿಂಗ್ ಮುಂತಾದ ಕೈಕೆಲಸದಷ್ಟು ಪ್ರಸಿದ್ಧಿ ಪಡೆದಿಲ್ಲ.

ಟ್ಯಾಟಿಂಗ್ ಅನ್ನು ಹತ್ತಿಯ ಅಥವಾ ನೈಲಾನ್ ದಾರದಲ್ಲಿ ಹಾಕುತ್ತಾರೆ. ಇದಕ್ಕೆ ಶಟಲ್ ಎನ್ನುವ ಕಣ್ಣಿನ ಆಕಾರದ ಮರದ ಅಥವಾ ಪ್ಲಾಸ್ಟಿಕ್‌ನಿಂದ

